ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

ಸಿ.ಸಿ.ಸಂಖ್ಯೆಃ 142/2020

| | | |
|---|---|---|
| ಸಾಕ್ಷಿದಾರರ ಹೆಸರು | ಉಮೇಶ್ ಹೆಚ್.ಬಿ. | ಸಿ.ಡಬ್ಲ್ಯೂಃ 3 |
| ಗಂಡನ / ತಂದೆ ಹೆಸರು | ಬಸವರಾಜು | ಪಿ.ಡಬ್ಲ್ಯೂಃ 1 |
| ವಯಸ್ಸು | 36 ವರ್ಷ | |
| ಉದ್ಯೋಗ | ಅಬಕಾರಿ ಪೇದೆ | |
| ವಾಸಸ್ಥಳ | ಹಾಸನ. | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 22/08/2025

ಮುಖ್ಯ ವಿಚಾರಣೆಃ ಸಸಅ ರಿಂದ

ದಿ.06.11.2019 ರಂದು ನಾನು ಮತ್ತು ಚಾಸಾ 6 ರವರು ಕರಿಗೋಡನಹಳ್ಳಿ ಗ್ರಾಮದಿಂದ ಚಾಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಹಸನೂರು ಗ್ರಾಮಕ್ಕೆ ಅಕ್ರಮವಾಗಿ ಮದ್ಯ ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಮಾಹಿತಿ ಬಂದ ಆಧಾರದ ಮೇಲೆ ಚಾಸಾ 1 ಮತ್ತು 2 ರವನ್ನು ಬರಮಾಡಿಕೊಂಡು ಶೋಧನಾ ಸಮುಚ್ಚಿತ್ತ ವಾರೆಂಟ್ ತಯಾರಿಸಿಕೊಂಡು ಹಸನೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹೋದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಒಬ್ಬ

ಮಹಿಳೆ ಬಿಳಿ ಚೀಲ ಬಿಟ್ಟು ಓಡಿ ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಸಿಕ್ಕಿರುವುದಿಲ್ಲ. ಸ್ಥಳದಲ್ಲಿದ್ದ ಚೀಲವನ್ನು ತೆಗೆದು ನೋಡಲಾಗಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕಿ 26 ಟೆಟ್ರಾ ಪ್ಯಾಕ್ ಗಳು ದೊರಕಿದ್ದು ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಮೊಹರು ಮ. 2-3.45 ರವರೆಗೆ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಿಳೆಯ ಹೆಸರು ವಿಚಾರಿಸಲಾಗಿ ಭಾಗ್ಯ C/o ಜಯಕುಮಾರ್ ಎಂದು ತಿಳಿದು ಬಂದಿರುತ್ತದೆ.

ಸಾಕ್ಷಿ ಮಹಜರ್ ನಲ್ಲಿ ತನ್ನ ಸಹಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿ ನಿಪಿ-1(ಎ) ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದಿರು ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ.ನ್ನು ನೋಡಿ ಸಾಕ್ಷಿ ಗುರುತಿಸಿದ್ದು 26 ಟೆಟ್ರಾ ಪ್ಯಾಕ್ ಗಳನ್ನು ಒಟ್ಟಾಗಿ ಮು.ಮಾ.1 ಎಂದು ಮತ್ತು ಪ್ಲಾಸ್ಟಿಕ್ ಚೀಲವನ್ನು ಮು.ಮಾ.2 ಎಂದು ಗುರುತಿಸಲಾಯಿತು. ಈ ಕುರಿತು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಟಿ.ಎಸ್.ಎಸ್. ವಕೀಲರಿಂದಃ**

ಆರೋಪಿಯ ಹೆಸರು ಯಾರು ತಿಳಿಸಿರುತ್ತಾರೆ ಎಂದರೆ ಚಾಸಾ 1 ಮತ್ತು 2 ರವರು. ಆಲೂರು ನಗರದಿಂದ ಘಟನಾ ಸ್ಥಳ 10-15

ಕಿ.ಮೀ. ಅಂತರದಲ್ಲಿದೆ. ಚಾಕನಹಳ್ಳಿಯಿಂದ ಕರಿಗೋಡನಹಳ್ಳಿ ಎಷ್ಟು ಅಂತರ ಇರುತ್ತದೆ ಎಂದರೆ ಗೊತ್ತಿಲ್ಲ, ಹಸನೂರಿನಿಂದ ಚಾಕನಹಳ್ಳಿ 5 ಕಿ.ಮೀ. ಅಂತರದಲ್ಲಿದೆ. ಹಸನೂರಿನಿಂದ ಚಾಕನಹಳ್ಳಿಗೆ 5 ಕಿ.ಮೀ. ಇರುವುದಿಲ್ಲ ಅವೆರಡೂ ಅಕ್ಕ ಪಕ್ಕ ಹಳ್ಳಿಗಳೆಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗದ ಕಾರಣ ಅಂತರ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಬಸ್ ನಿಲ್ದಾಣದ ಯಾವ ಭಾಗದಲ್ಲಿ ಚೀಲ ಸಿಕ್ಕಿರುತ್ತದೆ ಎಂದರೆ ಬಲಭಾಗದ ರಸ್ತೆಯಲ್ಲಿ. ಸದರಿ ಬಸ್ ನಿಲ್ದಾಣದ ಬಳಿ 3 ರಸ್ತೆಗಳು ಸೇರುತ್ತವೆ ಎಂದರೆ ಸರಿ. ಸದರಿ ಯಾವ ರಸ್ತೆಯಲ್ಲಿ ಚೀಲ ಸಿಕ್ಕಿರುತ್ತದೆ ಎಂದರೆ ಹಸನೂರು ಗ್ರಾಮದ ರಸ್ತೆಯಲ್ಲಿ. ಸದರಿ ಸ್ಥಳದಲ್ಲಿ ಮಹಜರ್ ಮಾಡಿರುತ್ತೇವೆ. ಸದರಿ ಸ್ಥಳದ ಪೂರ್ವದಲ್ಲಿ ಚಾಕನಹಳ್ಳಿ ರಸ್ತೆ, ಪಶ್ಚಿಮಕ್ಕೆ ಹಸನೂರು ರಸ್ತೆ, ಉತ್ತರಕ್ಕೆ ಆಲೂರಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ ನ್ಯಾಯಬೆಲೆ ಅಂಗಡಿ. ಸದರಿ ಚೆಕ್ಕುಬಂದಿ ಸುಳ್ಳು ಎಂದರೆ ಸರಿಯಲ್ಲ. ಸದರಿ ಸ್ಥಳದ ಚೆಕ್ಕುಬಂದಿ ಒಳಗಡೆ ಬಸ್ ನಿಲ್ದಾಣ ಇರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ರಮೇಲೆ ಸೀರಿಯಲ್ ನಂ. ಬರೆದು ಪಂಚರ ಸಹಿ ಪಡೆದಿರುತ್ತೀರ ಎಂದರೆ ಇಲ್ಲ. ನಿಪಿ 1 ರಡಿಯಲ್ಲಿ ಮು.ಮಾ.1 ಮತ್ತು 2 ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2ಕ್ಕೂ ಮತ್ತು ಈ ಪ್ರಕರಣದ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .